# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 186/2025**

| | |
|---|---|
| ಆರೋಪಿಯ ಹೆಸರುಃ | ಶ್ರೀಮತಿ ನಾಗಮ್ಮ ತೋಕು ಆಗೇರ |
| ವಯಸ್ಸುಃ | 51 ವರ್ಷ |
| ಉದ್ಯೋಗಃ | ಶಿಕ್ಷಕಿ |
| ವಿಳಾಸಃ | ಸಾಃ ಸರ್ವ(ಆಗೇರ ಸಭಾಭವನ ಹತ್ತಿರ), ತಾಃ ಅಂಕೋಲಾ |

## ಪ್ರಕ್ರಿಯಾ ಸಂಹಿತೆ ಕಲಂ 351 ರೀತ್ಯಾ ಆರೋಪಿತಳ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?
ಉತ್ತರಃ

ಪ್ರ 2ಃ ಫಿರ್ಯಾದಿ ಅಂಕೋಲಾ ತಾಲೂಕಾ ಕೃಷಿ ಹುಟ್ಟುವಳಿ ಮಾರಾಟ ಸಹಕಾರಿ ಸಂಘ ನಿಯಮಿತ, ಶಾಖೆಃ ಅಂಕೋಲಾ, ಇದರ ಮುಖ್ಯ ಕಾರ್ಯನಿರ್ವಾಹಕರು ಪಿಡಬ್ಲ್ಯೂ 1- ಅಶೋಕ ಗಣಪತಿ ನಾಯಕ ಇವರು ತಮ್ಮ ಸಾಕ್ಷಿಯಲ್ಲಿ ಶ್ರೀಮತಿ ಭಾರತಿ ರತ್ನಾಕರ ಆಗೇರ ಇವರು ಫಿರ್ಯಾದಿ ಸಂಸ್ಥೆಯಿಂದ ದಿನಾಂಕಃ 28-06-2022 ರಂದು ರೂ. 2,00,000/- ಸಾಲವನ್ನು ಮನೆ ಕಟ್ಟುವ ಸಲುವಾಗಿ ಪಡೆದಿದ್ದು ಇರುತ್ತದೆ. ಆರೋಪಿತಳು ವ, ಜಾಮಿನುದಾರರು ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿರುತ್ತಾರೆ. ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತಳ ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.2,27,544/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 04-09-2024 ರಂದು ತಾನು ಇಂಡಿಯನ್ ಓವರಸೀಸ್ ಬ್ಯಾಂಕ್ , ಶಾಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 720514 ನ್ನು ರೂ.2,27,544/- ಕ್ಕೆ ನೀಡಿರುತ್ತಾಳೆ. ಸದರಿ ಆರೋಪಿತಳು ನೀಡಿದ ಚೆಕ್ಕು ಖಾತೆಯಲ್ಲಿ " **Funds Insufficient** " ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ

ಕುರಿತಾಗಿ ಆರೋಪಿತಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3ಃ ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4ಃ ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 22/04/2025.

**( ಅರ್ಪಿತಾ ಬಿ. ಬೆಲ್ಲದ)**
**ಪ್ರಭಾರ ಪ್ರ ದ ನ್ಯಾದಂ, ಅಂಕೋಲಾ.**